# ಭಾರತೀಯ ಮಹಿಳಾ ಸಾಹಿತ್ಯ ನವಯುಗದ ನವಾನ್ವೇಷಣೆ



**ನಯನಾ ಕಾಶ್ಯಪ್**

ಕಲೆ: ಆಶಾರಾಣಿ ನಡೋಣಿ

ಭಾರತೀಯ ಮಹಿಳಾ ಸಾಹಿತ್ಯ ಸಾಗಿ ಬಂದ ದಾರಿಯ ಕ್ಷಿಪ್ರಾವಲೋಕನದ ಜತೆಗೆ, 1980ರಿಂದೀಚೆಗೆ ಬರೆಯುತ್ತಿರುವ ಲೇಖಕಿಯರ ಆಲೋಚನಾ ಕ್ರಮ ಮತ್ತು ವಸ್ತುವಿನ ಆಯ್ಕೆಯ ಕುರಿತು ಒಂದು ಕಿರುನೋಟ ಇಲ್ಲಿದೆ. ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲಿ ವಿಶ್ವದ, ಭಾರತದ ಅದೆಷ್ಟು ಮಹಿಳೆಯರು ವಿವಿಧ ಜಾತಿ, ವರ್ಗ, ಪಂಗಡ, ಲಿಂಗ, ದೇಶ, ಭಾಷೆ, ಸಂಸ್ಕೃತಿಗಳ ಬಾಂಧವ್ಯಗಳಾಚೆಗೆ ತಮ್ಮ ದನಿಯೆತ್ತಿದ್ದಾರೆಂದರೆ ಅವರೆಲ್ಲರನ್ನೂ ಹೀಗೆ ಒಂದು ಬರಹದಲ್ಲಿ ಬರಿಯ ಹೆಸರನ್ನು ಪ್ರಸ್ತಾಪಿಸುವುದೂ ಅಸಾಧ್ಯ. ಎಂತಲೇ ಕೆಲವೇ ಕೆಲವು ಪ್ರಾತಿನಿಧಿಕ ಲೇಖಕಿಯರು ಎನ್ನಬಹುದಾದವರನ್ನು, ಹೆಣ್ಣಿನ ನೆಲೆಯಿಂದಷ್ಟೇ ಅಲ್ಲದೆ ಮಾನವೀಯ ನೆಲೆಯಿಂದ ಬದುಕನ್ನು ಅರ್ಥೈಸಿಕೊಳ್ಳಲು ಯತ್ನಿಸುತ್ತಿರುವವರನ್ನು ಪರಿಚಯಿಸುವ ಪ್ರಯತ್ನ ಇಲ್ಲಿದೆ. ಹೆಣ್ಣಿನ ಬದುಕನ್ನು ವಿವಿಧ ದೃಷ್ಟಿಕೋನಗಳಿಂದ ಕಾಣುತ್ತಿರುವ ಜಾಗತಿಕ ಹಾಗೂ ಪ್ರಾದೇಶಿಕ ಭಾಷಾ ಲೇಖಕಿಯರು ಜೀವನದ ಸಂಘರ್ಷಗಳೊಂದಿಗೆ ಅನುಸಂಧಾನಕ್ಕೆ ನವಮಾರ್ಗಗಳನ್ನು ಅರಸುತ್ತಿದ್ದಾರೆ. ಒಂದೊಮ್ಮೆ ದನಿ ಅರಿಯದ ಜನಾಂಗ, ವರ್ಗ, ಜಾತಿಗಳ ಹಿನ್ನೆಲೆಯಿಂದ ಲೇಖಕಿಯರು ತಮ್ಮ ಜೀವನಾನುಭವಗಳಿಗೆ ದನಿ ಕೊಡುತ್ತಿದ್ದಾರೆ. ಆ ಎಲ್ಲದರ ಒಂದು ಹಾಸುನೋಟದ ಪ್ರಯತ್ನವಿದು.